# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 39/2012

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ : ಸತೀಶ್ ಮತ್ತು ಇತರರು**

**ಚಾಸಾ : 14 /** ಪ್ರಾಸಾ: 09

| | |
|---|---|
| ಹೆಸರು | **ಶ್ರೀನಿವಾಸ್** |
| ತಂದೆಯ ಹೆಸರು | **ಲೇಟ್ ಲಕ್ಷ್ಮಯ್ಯ** |
| ವಯಸ್ಸು | **45** |
| ಉದ್ಯೋಗ | **ಸಿ.ಪಿ.ಐ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 03.12.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ನಾನು ಕುದೂರು ಪೋಲಿಸ್ ಠಾಣೆಯಲ್ಲಿ ದಿಃ 30.06.2011 ರಿಂದ ದಿಃ27.09.2012ವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 09.07.2011 ರಂದು ಚಾಸಾ-1ರವರ ಮನೆಯಲ್ಲಿ ದೂರ, ನ್ನು ಪಡೆದು ಠಾಣೆಗೆ 8.45ಕ್ಕೆ ಹಾಜರಾಗಿ ಪ್ರಕರಣ ಸಂ. 152/2011 ರ ಕಲಂ 143, 147, 148, 307, 506, 327, 109 ಸಹವಾಚಕ 149 ರ ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ನೀವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತ ಮಾನ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಥಮ ವರ್ತ ಮಾನ ವರದಿಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಂತರ ದಿ:10.07.2011 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ಮತ್ತು ಪಂಚರಾದ ಚಾಸಾ-4, 10 ಮತ್ತು 11ರವರ ಸಮಕ್ಷಮ ಮಧ್ಯಾಹ್ನ 12.15 ರಿಂದ 01.00 ಗಂಟೆಯ ವರೆಗೂ ಪಂಚನಾಮೆಯನ್ನು ಜರುಗಿಸಿ ಸದರಿ ಪಂಚನಾಮೆಯ ಕಾಲದಲ್ಲಿ ಒಂದು ಬಿದಿರು ದೊಣ್ಣೆ, ಒಂದು ಕಾಡು ದೊಣ್ಣೆ, ಒಂದು ಬಿಳಿ ಬ್ಲೂಷ್ ಕೋಟ್, ಒಂದು ಕ್ರೀಂ ಕಲರ್ ಪ್ಯಾಂಟ್ ಹಾಗೂ ಸ್ಯಾಂಟ್ರೋ ಕಾರಿನ ಗ್ಲಾಸ್ ನ ಗಾಜಿನ ಪುಡಿಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಎಂ.ಓ ಗಳನ್ನು ಮಾಲುಪಟ್ಟಿ ಸಂ. 56/2011ಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಓ 1 ರಿಂದ 3ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ-2ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿ:26.07.2011 ರಂದು ಸಾಕ್ಷಿದಾರರಾದ ಚಾಸಾ-4, 6 ಮತ್ತು 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿ:28.07.2011 ರಂದು ಚಾಸಾ-5, 8 ಮತ್ತು 9ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿ:31.07.2011ರಂದು ಚಾಸಾ-1ರವರು ಗಾಯದ ಪ್ರಮಾಣ ಪತ್ರವನ್ನು ಚಾಸಾ-13 ರವರಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಚಾಸಾ-1ರವರು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ಚಾಸಾ-1ರವರು ಗಾಯದ ಪ್ರಮಾಣ ಪತ್ರವನ್ನು ನಿಪಿ-13 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪ್ರಕರಣದ 1ನೇ ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾರೆ. ಅವರಿಂದ ಸೂಕ್ತ ಜಾಮೀನು ಹಾಗೂ ಸ್ವಾಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತೆತೇನೆ. 1ನೇ ಆರೋಪಿಯು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಯ ಗುರುತಿನ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ದಿಃ17.07.2011ರಂದು ಚಾಸಾ-1ರವರು ಠಾಣೆಗೆ ಹಾಜರಾಗಿ ತಮ್ಮ ಮರು ಹೇಳಿಕೆಯನ್ನು ಲಿಖಿತ ರೂಪದಲ್ಲಿ ನನಗೆ ನೀಡಿರುತ್ತಾರೆ. ಸದರಿ ಮರು ಹೇಳಿಕೆಯನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿಯು ಚಾಸಾ-1ರವರು ನೀಡಿರುವ ಮರು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ನಂತರ ದಿಃ30.09.2011ರಂದು 2 ಮತ್ತು 3ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾರೆ. ಅವರಿಂದ ಸೂಕ್ತ ಜಾಮೀನು ಹಾಗೂ ಸ್ವಾಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 2 ಮತ್ತು 3ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 3ನೇ ಆರೋಪಿತರುಗಳು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿಗಳ ಗುರುತಿನ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ತನಿಖಾ ಕಾಲದಲ್ಲಿ ಕಲಂ 143, 147, 148 ,307, 109 ಸಹವಾಚಕ 149 ರ ಐಪಿಸಿ ರೀತ್ಯಾ ಪ್ರಕರಣ ಸಾಬೀತಾಗದ ಕಾರಣ ಕೈ ಬಿಟ್ಟಿರುತ್ತೇವೆ. ನಂತರ ದಿಃ08.11.2011 ರಂದು ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಕಲಂ. 324, 427, 448, 506 ಸಹವಾಚಕ 34 ರ ಐಪಿಸಿ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ .

ಪಾಟೀ **ಸವಾಲು:- ಶ್ರೀ. ಎಂ.ಎಸ್.ಎನ್.** ವಕೀಲರಿಂದ **ಆರೋಪಿಗಳ** ಪರವಾಗಿ:--

ನಿಮಗೆ ದೂರನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಠಾಣೆಗೆ ಬಂದು ದೂರು ನೀಡಿರುತ್ತಾರಾ

ಎಂದರೆ ಸಾಕ್ಷಿಯು ಇಲ್ಲ, ಗಲಾಟೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ, ನಾವು ಗಲಾಟೆ ಸ್ಥಳಕ್ಕೆ ಹೋದಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೆ ಹೋದಾಗ ಚಾಸಾ-1 ರವರು ಖುದ್ದಾಗಿ ಬರೆದರು ಎಂದರೆ ಸರಿ. ನಿಮಗೆ ದೂರು ನೀಡುವಾಗ ಅವರಿಗೆ ಪ್ರಜ್ಞೆ ಇತ್ತು ಎಂದರೆ ಸಾಕ್ಷಿಯು ಗಾಯ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಕಲಂ. 307 ನ್ನು ಹಾಕುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯ ತಲೆಗೆ ಗಾಯವಾಗಿತ್ತು ಎಂದು ನುಡಿಯುಉತ್ತಾರೆ. ನೀವು ದೂರನ್ನು ಪಡೆದುಕೊಂಡ ದಿನವೇ ಮಹಜರ್ ನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಆ ದಿನ ಕತ್ತಲಾದ್ದರಿಂದ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನವೇ ನೀವು ಎಂ.ಓ 1 ರಿಂದ 3 ಅನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಮಹಜರ್ ಸಮಯದಲ್ಲಿ ಅಮಾನತುಪಡಿಸಿಕೊಂಡಿರುತ್ತೇವೆ ಎಂದು ನುಡಿಯುಉತ್ತಾರೆ. ಎಂ.ಓ 1 ರಿಂದ 3ರಲ್ಲಿ ಬುಷ್ ಕೋಟ್ ಇಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ನೀವು ಎಂ.ಓ 1 ರಿಂದ 3 ಅನ್ನು ಅಮಾನಾತುಪಡಿಸಿಕೊಂಡ ನಂತರ ಎಫ್ .ಎಸ್. ಎಲ್ ವರದಿಗೆ ರಕ್ತ ಪರಿಶೀಲನೆಗೆ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ದೂರನ್ನು ಪಡೆದುಕೊಂಡ ನಂತರ ಆರೋಪಿತರ ಪತ್ತೆಗೆ ಕ್ರಮ ಕೈಗೊಂಡಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿತರು ತಲೆ ಮರಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಓ 1 ರಿಂದ 3 ನ್ನು ಚಾಸಾ-1ರವರೇ ನಿಮಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1ರವರು ತೋರಿಸಿರುತ್ತಾರೆ, ಪಂಚನಾಮೆ ಕಾಲದಲ್ಲಿ ನಾವು ಅವುಗಳನ್ನು ಅಮಾನತುಪಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಪಂಚನಾಮೆಗೆ ಹೋದಾಗ ಚಾಸಾ-1ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಸ್ಥಳದಲ್ಲಿ ಇದ್ದರೆ ಆಸ್ಪತ್ರೆಗೆ ಹೋಗಿ ದಾಖಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಸ್ಥಳದಲ್ಲಿ ಇದ್ದು, ಮಹಜರ್ ಗೆ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ಪಂಚರಿಗೆ ನೋಟೀಸ್ ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಸ್ಥಳಕ್ಕೂ ಹೋಗಿಲ್ಲ ಯಾವುದೇ ಮಹಜರ್ ಸಹ ಅನುಸರಿಸಿಲ್ಲ ಎಂದರೆ ಸರಿಯಲ್ಲ.

ಯಾವುದೇ ಸಾಕ್ಷಿದಾರರು ಸಹ ನೀಮ್ಮ ಮುಂದೆ ಹೇಳಿಕೆ ನೀಡಿಲ್ಲ



ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಸಹ ನಿಮ್ಮ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-13 ಗಾಯದ ಪ್ರಮಾಣ ಪತ್ರ ಸಹ ಚಾಸಾ-1ರವರಿಗೆ ಸಹಾಯವಾಗಲೆಂದು ಚಾಸಾ-13ರವರ ಜೊತೆ ಷರೀಕಾಗಿ ಪಡೆದುಕೊಂಡಿರುವ ಗಾಯದ ಪ್ರಮಾಣ ಪತ್ರ ಎಂದರೆ ಸರಿಯಲ್ಲ. ನೀವು ಹೇಳುವ ರೀತಿಯಲ್ಲಿ ಯಾವುದೇ ಗಲಾಟೆ ಆಗಿಲ್ಲ, ನೀವು ಚಾಸಾ-1ರವರು ಜೊತೆ ಷರೀಕಾಗಿ ಸುಳ್ಳು ದೂರನ್ನು ಪಡೆದು, ಸುಳ್ಳು ಸಾಕಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತನಿಖಾ ಕಾಲದಲ್ಲಿ ಆರೋಪಿತರ ವಿರುದ್ದ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**